13

# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 229 |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 14.12.2021 |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th><th>ANSWER</th></tr>
<tr>
<td>ಅ)</td>
<td>ನಿರುದ್ಯೋಗಿ ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭಿಸುವ ಬಗ್ಗೆ ಮಾರ್ಗದರ್ಶನ ನೀಡಲು ತರಬೇತಿ ಕಾರ್ಯಾಗಾರಗಳನ್ನು ಸರ್ಕಾರದಿಂದ ಹಮ್ಮಿಕೊಳ್ಳಲಾಗುತ್ತಿದೆಯೇ; (ವಿವರ ನೀಡುವುದು)</td>
<td>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ನಿರುದ್ಯೋಗಿ ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭಿಸುವ ಬಗ್ಗೆ ಮಾರ್ಗದರ್ಶನ ನೀಡಲು ಮತ್ತು ಕೈಗಾರಿಕೆಗಳನ್ನು ಪ್ರಾರಂಭಿಸುವ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ.<br><br>ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ದಿನಾಂಕ 11/10/2021 ರಂದು ಬೆಂಗಳೂರು ಅರಮನೆಯಲ್ಲಿ "ಉದ್ಯಮಿಯಾಗು, ಉದ್ಯೋಗ ನೀಡು" ಎನ್ನುವ ಜಾಗೃತಿ ಕಾರ್ಯಕ್ರಮವನ್ನು ಅಂತಿಮ ವರ್ಷದ ಇಂಜನಿಯರಿಂಗ್, ವೈದ್ಯಕೀಯ ಮತ್ತು ಎಂ.ಬಿ.ಎ ಪದವೀಧರರಿಗೆ ನಡೆಸಿತು. ಈ ಕಾರ್ಯಾಗಾರದಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳ ಸುಮಾರು 9000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.<br><br>ಮುಂದುವರೆದು ಇದೇ ಕಾರ್ಯಕ್ರಮವನ್ನು ಕಲಬುರಗಿ, ಬೆಳಗಾವಿ, ಮೈಸೂರು, ಮಂಗಳೂರು ಮತ್ತು ತುಮಕೂರುಗಳಲ್ಲಿ ನಡೆಸಲು ಪ್ರಸ್ತಾವಿಸಲಾಗಿದೆ.<br><br>ಇಲಾಖೆಯು ಜಿಲ್ಲಾ ಮಟ್ಟದಲ್ಲಿ, ಈ ಕೆಳಗಿನ ಜಿಲ್ಲೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿರುತ್ತದೆ.
<table>
<tr><td>ಹಾಸನ</td><td>26/08/2020</td></tr>
<tr><td>ಉಡುಪಿ</td><td>29/08/2020</td></tr>
<tr><td>ಮೈಸೂರು</td><td>08/09/2020</td></tr>
<tr><td>ಶಿವಮೊಗ್ಗ</td><td>19/09/2020</td></tr>
<tr><td>ಶಿರಸಿ</td><td>30/11/2020</td></tr>
<tr><td>ಬೀದರ್</td><td>19/01/2021</td></tr>
<tr><td>ಕಲಬುರಗಿ</td><td>20/01/2021</td></tr>
</table>
</td>
<td>Department of Industries and Commerce has been organizing awareness programs regarding self employment schemes available for unemployed youth to start enterprise.<br><br>Department of Industries and Commerce organized "Udyami yaagu, Udyog needu (Be an entrepreneur, Be an employer)" one day awareness program on 11/10/2021 at Bengaluru Palace, Bengaluru for final year Engineering, Medical and MBA students. About 9000 students from Bengaluru urban, Bengaluru rural, Kolar, Ramnagar and Chikballapur district had attended this program.<br><br>Further the department has proposed to conduct this program in Kalaburgi, Belagavi, Mysore, Mangalore and Tumkur in coming days.<br><br>The Department has conducted District level awareness programs in the following districts as given below:
<table>
<tr><td>HASSAN</td><td>26/08/2020</td></tr>
<tr><td>UDUPI</td><td>29/08/2020</td></tr>
<tr><td>MYSORE</td><td>08/09/2020</td></tr>
<tr><td>SHIMOGA</td><td>19/09/2020</td></tr>
<tr><td>SIRSI</td><td>30/11/2020</td></tr>
<tr><td>BIDAR</td><td>19/01/2021</td></tr>
<tr><td>KALABURAGI</td><td>20/01/2021</td></tr>
<tr><td>DAVANGERE</td><td>13/02/2021</td></tr>
<tr><td>HUBBALLI</td><td>13/02/2021</td></tr>
<tr><td>YADAGIRI</td><td>19/02/2021</td></tr>
<tr><td>CHAMARAJ NAGAR</td><td>09/03/2021</td></tr>
</table>
</td>
</tr>
</table>

| | | | |
|---|---|---|---|
| | | ದಾವಣಗೆರೆ 13/02/2021<br>ಹುಬ್ಬಳ್ಳಿ 13/02/2021<br>ಯಾದಗಿರಿ 19/02/2021<br>ಚಾಮರಾಜ ನಗರ 09/03/2021<br>ಗದಗ 13/02/2021<br>ಮಂಗಳೂರು 27/03/2021 | GADAG 13/03/2021<br>MANGALORE 27/03/2021 |
| ಆ) | ನಿರುದ್ಯೋಗಿ ಪದವೀಧರರು ಕೈಗಾರಿಕೆ ಪ್ರಾರಂಭಿಸಲು ಸರ್ಕಾರದಿಂದ "ಸೀಡ್ ಮನಿ" (Seed Money) ಮತ್ತು ಸಾಲದಂತಹ ಆರ್ಥಿಕ ಸಹಾಯ ಮಾಡಲಾಗುತ್ತಿದೆಯೇ;<br>(ವಿವರವಾದ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯವರ ಉದ್ಯೋಗ ಸೃಜನೆ ಯೋಜನೆಯಡಿಯಲ್ಲಿ "ಮಾರ್ಜಿನ ಮನಿ" ಯನ್ನು ನೀಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ. 25 ಲಕ್ಷಗಳವರೆಗೆ ಮತ್ತು ಸೇವಾ ವಲಯ ಚಟುವಟಿಕೆಗಳಿಗೆ ರೂ.10.00 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ (ಮಾರ್ಜಿನ್ ಮನಿ) ನೀಡಲಾಗುತ್ತಿದೆ.<br><br>ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರಿಗೆ "ಸಾಫ್ಟ್ ಸೀಡ್ ಕ್ಯಾಪಿಟಲ್"ನ್ನು ನೀಡಲಾಗುತ್ತಿದೆ.<br><br>ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.5.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ)ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಠ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ. | **Under Government of India's Prime Minister Employment Generation Program "Margin Money" is being given.**<br><br>Under this scheme financial assistance to the projects upto Rs.25 lakh for manufacturing sector and to the projects upto Rs. 10 lakh for Service Sector is extended in the form of loan through various banks. Subsidy (Margin Money) percentage is 15% to 35%. Max subsidy available is 3.75 lakhs to 8.75 lakhs.<br><br>**"Soft seed capital assistance" is given to first generation SC/ST entrepreneurs.**<br><br>Under this scheme, financial assistance to the extent of 50% of 1/3 of promoter's contribution (Debt Equity ratio of 2:1) will be given to SC/ST first generation entrepreneurs, intending to start new enterprises by availing loan from banks. Soft seed capital of maximum Rs.75.00 lakh will be sanctioned for the projects with less than Rs.5.00 crore investments on plant and machinery. |

| | | | |
|---|---|---|---|
| ಇ) | ಉದ್ಯಮಿಗೆ ಜಾಗ ಖರೀದಿಸಲು ಹಾಗೂ ಇತರೆ ಕಾರ್ಯಗಳಿಗೆ ಸಾಲ ಮಂಜೂರು ಮಾಡುವಾಗ ಬಡ್ಡಿ ದರದಲ್ಲಿ ರಿಯಾಯಿತಿ ನೀಡಲಾಗುತ್ತಿದೆಯೇ; (ಸಂಪೂರ್ಣ ವಿವರ ನೀಡುವುದು) | ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಶೇ. 75 ರಷ್ಟು ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ.<br><br>ಉದ್ಯಮಶೀಲರು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ರೂ.5 ಕೋಟಿ ಅವಧಿಸಾಲ ನೀಡುವ ಯೋಜನೆಯಿದ್ದು ಇದಕ್ಕೆ ಶೇ6% ಬಡ್ಡಿ ಸಹಾಯಧನ ನೀಡಲಾಗುವುದು. | Under SCSP/ TSP scheme Industrial sites/Plots are allotted at 75% subsidized rate to SC/ST entrepreneurs by the Karnataka Industrial Areas Development Board & Karnataka State Small Scale Industries Corporation.<br><br>6% interest subsidy will be given to the entrepreneurs who avail loan upto Rs.5 crore from Karnataka State Finance Corporation for setting up Micro and Small Enterprises. |
| ಈ) | ಪದವೀಧರರು ಸ್ವಯಂ ಉದ್ಯೋಗ ಪ್ರಾರಂಭ ಮಾಡಲು ಸರ್ಕಾರವು ಯಾವ ಯಾವ ಪ್ರೋತ್ಸಾಹಕ ಯೋಜನೆಗಳನ್ನು ರೂಪಿಸಿದೆ? (ಮಾಹಿತಿ ನೀಡುವುದು) | ಪದವೀಧರರು ಒಳಗೊಂಡಂತೆ ಎಲ್ಲಾ ಉದ್ಯಮಶೀಲರು ಸ್ವಯಂ ಉದ್ಯೋಗ ಪ್ರಾರಂಭ ಮಾಡಲು ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>1. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲು ಸರ್ಕಾರವು ಹೊಸ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತಂದಿರುತ್ತದೆ. ಇದರನ್ವಯ ದೊರೆಯುವ ಪ್ರೋತ್ಸಾಹ ಮತ್ತು ರಿಯಾಯಿತಿಗಳು ಈ ಕೆಳಗಿನಂತಿವೆ.<br>1. ಮುದ್ರಾಂಕ ಶುಲ್ಕ ವಿನಾಯಿತಿ<br>2. ನೋಂದಣಿ ಶುಲ್ಕ ರಿಯಾಯಿತಿ.<br>3. ಬಂಡವಾಳ ಹೂಡಿಕೆ ಸಹಾಯ ಧನ<br>4. ಕಿರು ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸಹಾಯಧನ<br>5. ವಿದ್ಯುತ್ ತೆರಿಗೆ ವಿನಾಯಿತಿ<br>6. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>7. ರಫ್ತು ಆಧಾರಿತ ಘಟಕಗಳಿಗೆ ರಿಯಾಯಿತಿ.<br>8. ತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ.<br>9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ<br>10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ | Government of Karnataka has been implementing the following programs for youths to undertake self employment.<br><br>1. Under Karnataka Industrial Policy 2020-25 the following incentives and concessions are being offered;<br>1. Stamp duty registration<br>2. Registration fee concession<br>3. Investment subsidy<br>4. Power subsidy to micro and small enterprises<br>5. Electricity tax exemption<br>6. Reimbursement of NA conversion fee<br>7. Incentives to Export oriented units.<br>8. Effluent treatment plant subsidy<br>9. Technology upgradation, quality certification subsidy.<br>10. Rain Water harvesting / conservation subsidy<br><br>2. **Prime Minister's Employment Generation Programme:** Under this scheme financial assistance to the projects upto Rs.25 lakh for manufacturing sector and to the projects upto Rs. 10 lakh for Service Sector is extended in the form of loan through various banks. Subsidy percentage is 15% to |

| | |
|---|---|
| 2. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಟ ಸಾಲ ರೂ. 25 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ. 15 ರಿಂದ ಶೇ.35 ರವರೆಗೆ ಗರಿಷ್ಟ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. | 35%. Max subsidy available is 3.75 lakhs to 8.75 lakhs. |
| 3. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇಕಡ 6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು. | 3. 6% interest subsidy is given to entrepreneurs desiring to establish micro and small enterprises availing loan from Karnataka State Finance Corporation for a period of 5 years. The max loan amount is Rs.5.00 crore. |
| 4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿಯಲ್ಲಿ ಶೇ 75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. | 4. Under SCSP/ TSP scheme Industrial sites/Plots are allotted at 75% subsidized rate to SC/ST entrepreneurs by the Karnataka Industrial Areas Development Board / Karnataka State Small Scale Industries Corporation. |
| 5. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ ಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನಿಂದ ಸಾಲ ಒದಗಿಸಿ ಯೋಜನಾ ವೆಚ್ಚದ ಮೇಲೆ ಶೇ 60 ರಷ್ಟು ಗರಿಷ್ಟ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. | 5. **Subsidy to micro enterprises/ artisan on loan availed from banks.** Under this scheme financial assistance will be given in the form of loan through financial institutions/ Commercial banks, Co-operative banks, Regional Rural Banks (excluding Credit co-operative societies) for the projects upto Rs. 10 lakhs to SC/ST entrepreneurs for setting up Micro/small enterprises. The subsidy given under this scheme by Government is 60% limited to maximum of Rs.5.00 lakhs. |
| 6. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ | 6. **Soft seed capital assistance to micro and small enterprises.** Under this scheme, financial assistance to the extent of 50% of 1/3 of promoter's contribution will be given to SC/ST first generation entrepreneurs, intending to start new enterprises by availing loan from banks. Soft seed capital of maximum Rs.75.00 lakh will be sanctioned for the projects with less than Rs.5.00 crore investments on plant and machinery with Debt Equity ratio of 2:1. |

| | | | |
|---|---|---|---|
| | | ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.5.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕರ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಠ ರೂ.75 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ. | |

ಸಿಐ 201 ಎಸ್‌ಎಸ್‌ಐ 2021

(ಎನ್.ನಾಗರಾಜು (ಎಂ.ಟಿ.ಬಿ))
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು